Computer (II)
26/12/22

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 756 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| 3) | ಉತ್ತರಿಸಬೇಕಾದ ದಿನಾಂಕ | 26-12-2022 |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ-ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಮೀಸಲಿಡಲಾಗಿರುವ ಅನುದಾನವೆಷ್ಟು? ಸಂಪೂರ್ಣ ವಿವರವನ್ನು ವಾರ್ಷಿಕವಾರು ದಾಖಲಾತಿಗಳೊಂದಿಗೆ ಒದಗಿಸುವುದು; | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಕಳೆದ ಐದು ವರ್ಷಗಳಲ್ಲಿ ಮೀಸಲಿರಿಸಿದ ಅನುದಾನದ ಬಗ್ಗೆ ಮಾಹಿತಿಯನ್ನು **ಅನುಬಂಧ-1ರಲ್ಲಿ** ವಿವರಿಸಿದೆ. |
| (ಆ) ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ನೀಡುವ ವಿವಿಧ ತರಬೇತಿ ಹಾಗೂ ಯೋಜನೆಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು; | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜಿವನೋಪಾಯ ಇಲಾಖೆ ವತಿಯಿಂದ ನೀಡಲಾಗುವ ವಿವಿಧ ತರಬೇತಿ ಹಾಗೂ ಯೋಜನೆಗಳ ಸಂಪೂರ್ಣ ಮಾಹಿತಿ ಕೆಳಕಂಡಂತಿದೆ.<br><br>**<u>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ</u>**<br><br>**1. ಕುಶಲಕರ್ಮಿ ತರಬೇತಿ ಕಾರ್ಯಕ್ರಮ (CTS)**<br><br>ಈ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ 270 ಸರ್ಕಾರಿ, 192 ಅನುದಾನಿತ ಖಾಸಗಿ ಹಾಗೂ 1030 ಅನುದಾನ ರಹಿತ ಖಾಸಗಿ ಕೈ.ತ.ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.<br><br>ಸದರಿ ಸಂಸ್ಥೆಗಳಲ್ಲಿ ನೀಡುವ ತರಬೇತಿಯ ಮಾನದಂಡವನ್ನು ತರಬೇತಿ ಮಹಾ ನಿರ್ದೇಶನಾಲಯ (ಡಿಜಿಟಿ), ನವದೆಹಲಿ ಇವರಿಂದ ನಿಗಧಿಪಡಿಸಲಾಗುತ್ತದೆ. 52 ವಿವಿಧ ಇಂಜಿನಿಯರಿಂಗ್ ಹಾಗೂ ನಾನ್ ಇಂಜಿನಿಯರಿಂಗ್ ವೃತ್ತಿಗಳಲ್ಲಿ ಒಂದು ವರ್ಷದ/ ಎರಡು ವರ್ಷಗಳ ತರಬೇತಿ ನೀಡಿ, ತರಬೇತಿ ನಂತರ ಪರೀಕ್ಷೆಗಳನ್ನು ನಡೆಸಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ. ತರಬೇತಿ ಪಡೆದ ತರಬೇತಿದಾರರು ಸಾರ್ವಜನಿಕ ಹಾಗೂ ಖಾಸಗಿ ಉದ್ಯಮಗಳಲ್ಲಿ ಉದ್ಯೋಗಾವಕಾಶಗಳನ್ನು ಪಡೆಯುತ್ತಿದ್ದಾರೆ ಹಾಗೂ ಈ ತರಬೇತಿಯಿಂದ ಅನೇಕ ಅಭ್ಯರ್ಥಿಗಳು ಸ್ವ ಉದ್ಯೋಗಿಗಳಾಗಲು ಸಹ ಸಹಕಾರಿಯಾಗಿದೆ.<br><br>ಈ ಯೋಜನೆ ಅಡಿಯಲ್ಲಿ ವಿವಿಧ ರೀತಿಯ ಉನ್ನತೀಕರಣವನ್ನು ಕಾಲಕಾಲಕ್ಕೆ ಜಾರಿಗೊಳಿಸಲಾಗುತ್ತಿದೆ.<br><br>ಅ) ವಿಶ್ವಬ್ಯಾಂಕ್ ನೆರವಿನ ಸೆಂಟರ್ ಆಫ್ ಎಕ್ಸಲೆನ್ಸ್ (ಸಿ.ಓ.ಇ.) ಕಾರ್ಯಕ್ರಮ.<br><br>ಆ) ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ (ಪಿ.ಪಿ.ಪಿ.) ಕಾರ್ಯಕ್ರಮ. |

ಇ) ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆ.

ಈ) ಸ್ಕಿಲ್ ಸ್ಟ್ರೆಂತನಿಂಗ್ ಫೌರ್ ಇಂಡಸ್ಟ್ರಿಯಲ್ ವ್ಯಾಲ್ಯೂ ಎನ್‌ಹ್ಯಾನ್ಸ್‌ಮೆಂಟ್ (ಸ್ಟ್ರೈವ್).

ಉ) ಮೆ॥ ಟಾಟಾ ಟೆಕ್ನಾಲಜೀಸ್ ಸಹಭಾಗಿತ್ವದಲ್ಲಿ 150 ಸರ್ಕಾರಿ ಕೈ.ತ.ಸಂಸ್ಥೆಗಳನ್ನು ಆಧುನಿಕ/ಭವಿಷ್ಯದ ತಂತ್ರಜ್ಞಾನದ ವೃತ್ತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಉನ್ನತೀಕರಿಸಲಾಗಿದೆ. ಪ್ರಸ್ತುತ ಇನ್ನೂ 30 ಸಂಸ್ಥೆಗಳನ್ನು ಉನ್ನತೀಕರಿಸಲು ಕ್ರಮವಹಿಸಲಾಗುತ್ತಿದೆ.

**2. ಶಿಶಿಕ್ಷು ತರಬೇತಿ ಕಾರ್ಯಕ್ರಮ (ATS)**

ಈ ಕಾರ್ಯಕ್ರಮದಡಿಯಲ್ಲಿ ಶಿಶಿಕ್ಷು ಕಾಯ್ದೆ 1961 ಜಾರಿಗೊಳಿಸಲಾಗುತ್ತಿದ್ದು, ಉದ್ದಿಮೆಗಳಲ್ಲಿ ಶೇಕಡ 12 ರಷ್ಟು ಶಿಶಿಕ್ಷುಗಳನ್ನು ಪ್ರವೇಶಾತಿಗೊಳಿಸಿ, ಶಿಷ್ಯವೇತನ ನೀಡಿ ತರಬೇತಿಯನ್ನು ನೀಡಲಾಗುತ್ತಿದೆ. ತರಬೇತಿಯ ನಂತರ ಪರೀಕ್ಷೆಗಳನ್ನು ನಡೆಸಿ, ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಈ ಯೋಜನೆಯಿಂದ ತರಬೇತಿಯ ನಂತರ ಅಭ್ಯರ್ಥಿಗಳು ಕೌಶಲ್ಯವನ್ನು ಹೆಚ್ಚಿಸಿಕೊಂಡು ಕೆಲಸದ ಅನುಭವದೊಂದಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿದೆ.

ಈ ಯೋಜನೆಯನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರದಿಂದ NAPS ಮತ್ತು KATS ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಇದರಡಿಯಲ್ಲಿ ಉದ್ಯಮಗಳಿಗೆ ಪ್ರತಿ ಅಭ್ಯರ್ಥಿಗೆ ಕೇಂದ್ರ ಸರ್ಕಾರದ ಪಾಲು ರೂ.1500/- ಮತ್ತು ರಾಜ್ಯ ಸರ್ಕಾರದ ಪಾಲು ರೂ.1500/- ಗಳನ್ನು ಪಾವತಿಸಲಾಗುತ್ತಿದೆ.

**3. ರಾಜ್ಯ ತರಬೇತಿ ಮತ್ತು ಸಂಶೋಧನಾ ಕೇಂದ್ರ (STARC), ಮಳವಳ್ಳಿ :**

ಈ ಯೋಜನೆ ಅಡಿಯಲ್ಲಿ ತರಬೇತುದಾರರಿಗೆ ಹಾಗೂ ಸಿಬ್ಬಂದಿಗಳಿಗೆ ತರಬೇತಿ ಮತ್ತು ಮರು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಹಾಗೂ ಪಠ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು.

**4. ತರಬೇತುದಾರರ ತರಬೇತಿ ಸಂಸ್ಥೆ (ITOT), ದಾವಣಗೆರೆ :**

ಈ ಯೋಜನೆ ಅಡಿಯಲ್ಲಿ ತರಬೇತುದಾರರಿಗೆ CITS ತರಬೇತಿ ನೀಡಲಾಗುತ್ತಿದೆ.

**5. ಕರ್ನಾಟಕ ಜರ್ಮನ್ ಬಹುಕೌಶಲ್ಯಾಭಿವೃದ್ಧಿ ಕೇಂದ್ರ (KGMSDC):**

ಈ ಯೋಜನೆ ಅಡಿಯಲ್ಲಿ KGTTI ಸಂಸ್ಥೆಗಳ ಮೂಲಕ ಕೈಗಾರಿಕೆಗಳಲ್ಲಿ ಬೇಡಿಕೆಯಿರುವ ಆಧುನಿಕ ತಂತ್ರಜ್ಞಾನದ ತರಬೇತಿಗಳನ್ನು ನೀಡಲಾಗುತ್ತಿದೆ.

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ**

- ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗದಾತರು ಹಾಗೂ ಉದ್ಯೋಗಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರಲು Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್ ಅನ್ನು ಸೃಷ್ಟಿಸಿದೆ.
- ರಾಮನಗರ ಜಿಲ್ಲೆಯಲ್ಲಿ ಪೈಲಟ್ ಆಧಾರದ ಮೇರೆಗೆ ಸ್ಕಿಲ್ ಹಬ್ ಅನ್ನು (Skill Hub) ಈಗಾಗಲೇ ಸ್ಥಾಪಿಸಲಾಗಿದ್ದು, ಸದರಿ (Skill Hub)ನಲ್ಲಿ ಒಂದೇ ಸೂರಿನಡಿ ಯುವಕ-ಯುವತಿಯರಿಗೆ ಉದ್ಯೋಗಾವಕಾಶ, ಕೌಶಲ್ಯ

ತರಬೇತಿ ಮತ್ತು ಉದ್ಯಮಶೀಲತೆಯ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

- Skill on Wheels ಯೋಜನೆಯನ್ನು ಪೈಲಟ್ ಆಧಾರದ ಮೇರೆಗೆ ಪ್ರಾರಂಭಿಸಿ ಈಗಾಗಲೇ ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಒಟ್ಟಾರೆ 90 ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದೆ. ಅದೇ ರೀತಿ ದೂರದ ಹಳ್ಳಿಗಾಡಿನ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಇತರೆ ಪ್ರದೇಶಗಳಲ್ಲಿನ ಯುವ ಜನತೆಗೆ ಸ್ಥಳದಲ್ಲಿಯೇ ಕೌಶಲ್ಯಾಧಾರಿತ ತರಬೇತಿಯನ್ನು ನೀಡುವ ಆಕಾಂಕ್ಷೆ ಹೊಂದಲಾಗಿದೆ.
- ಕೃಷಿ ವಿಜ್ಞಾನ ಕೇಂದ್ರಗಳನ್ನು ತರಬೇತಿ ಪಾಲುದಾರರನ್ನಾಗಿ ಮಾಡಿ ಕೃಷಿ ತರಬೇತಿ ಸೇರಿ ಸ್ವಯಂ ಉದ್ಯೋಗಗಳಲ್ಲಿ ಅಂದರೆ organic grower, Agricultural mechanic, seeds grower ಕುರಿತು ತರಬೇತಿ ನೀಡಲಾಗಿದೆ ಹಾಗೂ ಜಿ.ಕೆ.ವಿ.ಕೆ ವಿಶ್ವವಿದ್ಯಾನಿಲಯದಿಂದ ಈಗಾಗಲೇ 30 ಅಭ್ಯರ್ಥಿಗಳಿಗೆ ಹೈನುಗಾರಿಕೆ ಹಾಗೂ ಬೇಕರಿ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದೆ.
- ಸ್ವ-ಸಹಾಯ ಸಂಘಗಳ 818 ಮಹಿಳೆಯರಿಗೆ ಘನತ್ಯಾಜ್ಯ ನಿರ್ವಹಣೆ ತರಬೇತಿ ಮತ್ತು ವಾಹನ ಚಾಲನೆ ಬಗ್ಗೆ ಈಗಾಗಲೇ ತರಬೇತಿಯನ್ನು ನೀಡಲಾಗಿದೆ.

<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u>

ರಾಷ್ಟ್ರೀಯ ಜೀವನೋಪಾಯದಡಿ ಬರುವ ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಯೋಜನೆಯಡಿ (ಡೇ-ನಲ್ಮ್) ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**1) ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ**

ಸದರಿ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಹಾಗೂ ಸ್ವ-ಸಹಾಯ ಸಂಘಗಳಿಗೆ ರೂ.10,000/- ಮತ್ತು ಒಕ್ಕೂಟಗಳಿಗೆ ರೂ.50,000/- ಆವರ್ತಕ ನಿಧಿ ವಿತರಣೆ ಹಾಗೂ ಸಂಘ ಮತ್ತು ಒಕ್ಕೂಟದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

**2) ಸ್ವಯಂ ಉದ್ಯೋಗ ಕಾರ್ಯಕ್ರಮ:**

ಈ ಉಪಘಟಕದ ಯೋಜನೆಯಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00ಲಕ್ಷ, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುತ್ತಿದೆ.

**3) ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:**

ಈ ಉಪಘಟಕದ ಯೋಜನೆಯಡಿ ನಗರದ ನಿರುದ್ಯೋಗ ಯುವಕ/ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು

ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುತ್ತಿದೆ.

**4)ನಗರದ ವಸತಿ ರಹಿತರಿಗೆ ಆಶ್ರಯ:**

ಈ ಉಪಘಟಕದ ಯೋಜನೆಯಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುತ್ತಿದೆ.

**5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:**

ಈ ಉಪಘಟಕದ ಯೋಜನೆಯಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ.

**6)ಸಾಮರ್ಥ್ಯ ಅಭಿವೃದ್ಧಿ ಮತ್ತು ತರಬೇತಿ:**

ಈ ಉಪಘಟಕದ ಯೋಜನೆಯಡಿ ಅಭಿಯಾನದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಂಡಿರುವ ಅಧಿಕಾರಿ/ಸಿಬ್ಬಂದಿಗಳಿಗೆ ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. ಮುಂದುವರೆದು ಇದೇ ಯೋಜನೆಯಡಿ 1,41,160 ನಗರದ ಯುವಕ/ಯುವತಿಯರಿಗೆ ವಿವಿಧ ರೀತಿಯ ಉದ್ಯೋಗ ಆಧಾರಿತ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ.

**ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್** ಸಂಸ್ಥೆಯು **ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕಾರ್ಯಕ್ರಮದಡಿ** ರಾಜ್ಯದ 226 ತಾಲ್ಲೂಕುಗಳಲ್ಲಿ ಗ್ರಾಮೀಣ ಮಹಿಳಾ ಬಡತನ ರೇಖೆಯ ಮಹಿಳೆಯರನ್ನು ಸ್ವ–ಸಹಾಯ ಗುಂಪಿನಡಿ ಸಂಘಟಿಸುವ ಮೂಲಕ ಜೀವನೋಪಾಯ ಸ್ವ–ಉದ್ಯೋಗಗಳನ್ನು ಕಲ್ಪಿಸುವ ಗುರಿ ಮತ್ತು ಉದ್ದೇಶದಿಂದ ಗ್ರಾಮೀಣ ಭಾಗದ ಎಲ್ಲಾ ಬಡ ಕುಟುಂಬದಿಂದ ಓರ್ವ ಮಹಿಳೆಯನ್ನು ಸ್ವ–ಸಹಾಯ ಗುಂಪಿಗೆ ಸೇರಿಸಲು ಕ್ರಮವಹಿಸಲಾಗಿದೆ. ಈ ಯೋಜನೆಯ ಪ್ರಮುಖ ಚಟುವಟಿಕೆಯೆಂದರೆ ಹೊಸ ಸ್ವ–ಸಹಾಯ ಗುಂಪುಗಳ ರಚನೆ, ಹಾಗೂ ಸ್ವ–ಸಹಾಯ ಗುಂಪುಗಳ ಬಲವರ್ಧನೆ ಹಾಗೂ ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸುವ ಮೂಲಕ ಅವರಿಗೆ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸುವುದಾಗಿರುತ್ತದೆ. ಇದುವರೆಗೂ ರಾಜ್ಯದಲ್ಲಿ 29.48ಲಕ್ಷ ಮಹಿಳೆಯರನ್ನು 2.45ಲಕ್ಷ ಸ್ವ–ಸಹಾಯ ಗುಂಪುಗಳಡಿ ಸಂಘಟಿಸಲಾಗಿದೆ. ಅಲ್ಲದೇ ಸ್ವ–ಸಹಾಯ ಗುಂಪುಗಳಿಗೆ ಪಂಚಸೂತ್ರಗಳ ಪಾಲನೆ, ಬ್ಯಾಂಕ್ ಸಂಪರ್ಕ, ಜೀವನೋಪಾಯ ಚಟುವಟಿಕೆಗಳು, ವಾರ್ಷಿಕ ಲೆಕ್ಕ ಪರಿಶೋಧನೆ ಮುಂತಾದ ತರಬೇತಿಗಳನ್ನು ನೀಡುವುದರ ಮೂಲಕ ಗುಂಪುಗಳನ್ನು ಸುಸ್ಥಿರವಾಗಿಸಲು ಕ್ಷೇತ್ರ ಮಟ್ಟದಲ್ಲಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಮೂಲಕ ನಿರಂತರ ಬೆಂಬಲ ನೀಡಲಾಗುತ್ತಿದೆ.

**ಸುತ್ತುನಿಧಿ:–**

ಸ್ವ–ಸಹಾಯ ಗುಂಪುಗಳ ಸದಸ್ಯರು ಸ್ವ–ಉದ್ಯೋಗ ಕೈಗೊಳ್ಳಲು ಬ್ಯಾಂಕ್ ಸಾಲ ಪಡೆದು ಆರ್ಥಿಕವಾಗಿ ಸಬಲರಾಗುವಂತೆ ಮಾಡಲು ಅರ್ಹ ಗುಂಪುಗಳನ್ನು ಗುರುತಿಸಿ, ಶ್ರೇಣೀಕರಣ ಮಾಡಿ ಗರಿಷ್ಠ ಒಂದು ಗುಂಪಿಗೆ ಒಟ್ಟು ರೂ.15000/– ಗಳನ್ನು ಅನುದಾನ ರೂಪದಲ್ಲಿ ಒದಗಿಸಲು ಕ್ರಮವಹಿಸಲಾಗಿದೆ. ರಾಜ್ಯದಲ್ಲಿ ಇದುವರೆಗೂ 2013–14 ರಿಂದ 2022–23 ವರೆಗೆ 37,954 ಸ್ವ–ಸಹಾಯ ಗುಂಪುಗಳಿಗೆ ರೂ.5,665.00 ಲಕ್ಷಗಳ ಸುತ್ತು ನಿಧಿಯನ್ನು ನೀಡಲಾಗುತ್ತಿದೆ.

| | |
|---|---|
| | **ಸಮುದಾಯ ಬಂಡವಾಳ ನಿಧಿ:-**<br><br>(ಸಿ.ಐ.ಎಫ್) ಒಕ್ಕೂಟಗಳ ಸುಸ್ಥಿರತೆಯೊಂದಿಗೆ ಜೀವನೋಪಾಯ ಉದ್ಯೋಗಗಳನ್ನು ಕೈಗೊಳ್ಳಲು ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ಅನುಕೂಲ ಒದಗಿಸುವ ದೃಷ್ಟಿಯಿಂದ ಕಡಿಮೆ ಬಡ್ಡಿದರದಲ್ಲಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಮೂಲಕ ರೂ.1.50 ಲಕ್ಷ ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗುತ್ತಿದೆ. ಇದುವರೆಗೆ ಒಕ್ಕೂಟಗಳ ಮೂಲಕ 98,493 ಸ್ವ-ಸಹಾಯ ಗುಂಪುಗಳಿಗೆ ರೂ.97,909.00 ಲಕ್ಷಗಳಷ್ಟು ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗಿದ್ದು ಈ ಮೊತ್ತವು ಗುಂಪುಗಳಲ್ಲಿ ನಿರಂತರವಾಗಿ ಲಭ್ಯವಿರುತ್ತದೆ. ಅಲ್ಲದೇ ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕ್ ಲಿಂಕೇಜ್ ಮೂಲಕ ಅವಶ್ಯಕ ಸಾಲ-ಸೌಲಭ್ಯ ಒದಗಿಸಲಾಗುತ್ತಿದೆ.<br><br>**ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ:-**<br><br>ರಾಜ್ಯದ 3 ಜಿಲ್ಲೆಗಳ ಆಯ್ದ 15 ತಾಲ್ಲೂಕುಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ ಅನುಷ್ಠಾನಗೊಳ್ಳುತ್ತಿದ್ದು, 13 ಒನ್‌ಸ್ಟಾಪ್ ಸೆಂಟರ್‌ಗಳ ಮೂಲಕ ಪ್ರಮುಖವಾಗಿ ಮಹಿಳೆಯರನ್ನು ಉದ್ದಿಮೆದಾರರನ್ನಾಗಿ ಬೆಳೆಸುವಲ್ಲಿ ಸೂಕ್ತ ತರಬೇತಿ, ಕೌಶಲ್ಯಗಳ ತಾಂತ್ರಿಕ ಬೆಂಬಲ ಮತ್ತು ಮಾರುಕಟ್ಟೆ ವ್ಯವಸ್ಥೆ ಮತ್ತು ಸಮುದಾಯ ಉದ್ಯಮ ನಿಧಿಗಳನ್ನು ಅರ್ಹತೆಯಾನುಸಾರ ಕಲ್ಪಿಸಲಾಗುತ್ತಿದೆ. ಅಲ್ಲದೇ ಈ 03 ಜಿಲ್ಲೆಗಳಲ್ಲಿ 2017 ಮಹಿಳೆಯರನ್ನು ಉದ್ಯಮದಾರರನ್ನಾಗಿಸುವ ಕಾರ್ಯ ಪ್ರಗತಿಯಲ್ಲಿದೆ.<br><br>**<u>ದೀನ್ ದಯಾಳ ಉಪಾದ್ಯಾಯ ಗ್ರಾಮೀಣ ಕೌಶಲ್ಯ ಯೊಜನೆಯ ಡಿಡಿಯುಜಿಕೆವೈ:-</u>**<br><br>ರಾಜ್ಯದಲ್ಲಿ 13 ಯೋಜನಾ ಅನುಷ್ಠಾನ ಸಂಸ್ಥೆಗಳಡಿ 17 ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಮುಖವಾಗಿ ಗ್ರಾಮೀಣ ಯುವಕ ಯುವತಿಯರಿಗೆ ಬೇಡಿಕೆಗನುಗುಣವಾಗಿ ವೇತನ ಆಧಾರಿತ ವಿವಿಧ ಕೌಶಲ್ಯ ತರಬೇತಿಗಳನ್ನು ಒದಗಿಸಿ ಉದ್ಯೋಗ ಹೊಂದಲು ಬೆಂಬಲಿಸಲಾಗುತ್ತಿದೆ. ಇದುವರೆಗೆ ರಾಜ್ಯದಲ್ಲಿ 50,127 ಅಭ್ಯರ್ಥಿಗಳಿಗೆ ವಿವಿಧ ತರಬೇತಿಗಳನ್ನು ನೀಡಿ 25840 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.<br><br>**ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಯೋಜನೆ:-**<br><br>ಈ ಯೋಜನಾ ಕಾರ್ಯಕ್ರಮದಡಿ 31 ತರಬೇತಿ ಸಂಸ್ಥೆಗಳ ಮೂಲಕ ಗ್ರಾಮೀಣ ಯುವಕ ಯುವತಿಯರಿಗೆ ಅಭ್ಯರ್ಥಿಗಳ ಆಯ್ಕೆಯಾನುಸಾರ ಸ್ವ-ಉದ್ಯೋಗ ಆಧಾರಿತ ಉಚಿತ ತರಬೇತಿಯನ್ನು ನೀಡಲಾಗುತ್ತಿದ್ದು, ರಾಜ್ಯದಲ್ಲಿ ಒಟ್ಟು 3,47,646 ಅಭ್ಯರ್ಥಿಗಳಿಗೆ ನೀಡಿ ಸ್ವ-ಉದ್ಯೋಗ ಒದಗಿಸಲಾಗಿರುತ್ತದೆ. ಇವರುಗಳಲ್ಲಿ 2,90,806 ಬಡತನ ರೇಖೆಯ ಕುಟುಂಬಗಳ ಅಭ್ಯರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. |

**ಸಿಡಾಕ್**

**ಉದ್ಯಮಶೀಲತಾ ತಿಳುವಳಿಕೆ ಶಿಬಿರ :**

ಉದ್ಯಮಶೀಲತೆಯ ಬಗ್ಗೆ ತಿಳುವಳಿಕೆ ನೀಡುವುದು, ಉದ್ಯಮಶೀಲತೆಗೆ ಸರ್ಕಾರದಿಂದ ದೊರೆಯುವ ನೆರವಿನ ಬಗ್ಗೆ ತಿಳುವಳಿಕೆ ನೀಡುವುದು. ಈ ತರಬೇತಿಗಳಲ್ಲಿ ಪಾಲ್ಗೊಳ್ಳುತ್ತಿರುವ ವಿದ್ಯಾವಂತ ಯುವಕ / ಯುವತಿಯರನ್ನು ಉದ್ಯಮಶೀಲತೆಯತ್ತ ಸೆಳೆಯಲು ಹಾಗೂ ಅವರುಗಳು ತಮ್ಮದೇ ಆದಂತಹ ಸ್ವಂತ ಉದ್ಯೋಗಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸೂಕ್ತ ತಿಳುವಳಿಕೆಯ ಮುಖಾಂತರ ಪ್ರೇರೆಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

ಮುಂದುವರೆದು, ಈ ಒಂದು ದಿನದಲ್ಲಿ ಅಭ್ಯರ್ಥಿಗಳಿಗೆ ಸ್ವ-ಉದ್ಯೋಗ ಪ್ರಾರಂಭಿಸಲು ಬೇಕಾಗುವ ಮಾರ್ಗದರ್ಶನ ನೀಡಿ ಯೋಜನಾ ಅನುಷ್ಠಾನದಲ್ಲಿ ಬರುವ ಹಂತಗಳ ಬಗ್ಗೆ ತಿಳುವಳಿಕೆ ನೀಡಲಾಗುವುದು.

**ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ:-** ಈ ತರಬೇತಿ ಶಿಬಿರದಲ್ಲಿ ಅಂತಿಮ ವರ್ಷದ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗವನ್ನು ಪ್ರಾರಂಭಿಸಲು ಹಾಗೂ ಸಣ್ಣ ಉದ್ಯಮಗಳ ಸ್ಥಾಪನೆಯತ್ತ ಆಕರ್ಷಿಸುವ ಸಲುವಾಗಿ ಹಮ್ಮಿಕೊಳ್ಳಲಾಗುವುದು. ಈ ಮೂರು ದಿನಗಳಲ್ಲಿ ಅಭ್ಯರ್ಥಿಗಳಿಗೆ ಸ್ವ-ಉದ್ಯೋಗ ಪ್ರಾರಂಭಿಸಲು ಬೇಕಾಗುವ ಮಾರ್ಗದರ್ಶನ ನೀಡಿ ಯೋಜನಾ ಅನುಷ್ಠಾನದಲ್ಲಿ ಬರುವ ಹಂತಗಳ ಬಗ್ಗೆ ತಿಳುವಳಿಕೆ ನೀಡಲಾಗುವುದು.

**ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ :**

ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಆಸಕ್ತ ಯುವಕ-ಯುವತಿಯರಿಗೆ ತಮ್ಮದೇ ಆದ ಉದ್ಯಮವನ್ನು ಪ್ರಾರಂಭಿಸಲು ಹಮ್ಮಿಕೊಳ್ಳಲಾಗುವುದು. ಈ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳುವದಕ್ಕೆ ಪ್ರೇರಣೆಯನ್ನು ಒದಗಿಸುವುದಲ್ಲದೇ ಉದ್ಯಮದ ಸ್ಪಷ್ಟತೆ, ಮಾರಾಟ ಹಾಗೂ ಮಾರುಕಟ್ಟೆ ಕೌಶಲ್ಯ ಹಾಗೂ ತಂತ್ರ, ಕಾನೂನು ಮತ್ತು ಕಾಯಿದೆಗಳನ್ನು ಅರ್ಥೈಸಿಕೊಳ್ಳುವಲ್ಲಿ ಅತೀ ಅವಶ್ಯಕವಾಗಿದೆ.

**ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ :**

ಮೂವತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಆಸಕ್ತ ಯುವಕ ಯುವತಿಯರಿಗೆ ಮತ್ತು ತಮ್ಮದೇ ಆದ ಉದ್ಯಮವನ್ನು ಪ್ರಾರಂಭಿಸಲು ಹಮ್ಮಿಕೊಳ್ಳಲಾಗುವುದು. ಈ ಕಾರ್ಯಕ್ರಮಗಳು ಅಭ್ಯರ್ಥಿಗಳ ಉದ್ಯಮಶೀಲತಾ ಮತ್ತು ಸಾಮರ್ಥ್ಯ ಮತ್ತು ಅಭಿವೃದ್ಧಿಗೆ ಸಹಕಾರಿಯಾಗುವುದು.

| ಪ್ರಶ್ನೆ | ಉತ್ತರ |
|---|---|
| (ಇ) ರಾಜ್ಯದಲ್ಲಿ ಕಳೆದ 5ವರ್ಷಗಳಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ಎಷ್ಟು ಜನ ನಿರುದ್ಯೋಗಿಗಳಿಗೆ ತರಬೇತಿಯನ್ನು ನೀಡಲಾಗಿದೆ; ಸದರಿ ತರಬೇತಿಗೆ ಖರ್ಚಾಗಿರುವ ಅನುದಾನವೆಷ್ಟು? (ಸಂಪೂರ್ಣ ವಿವರವನ್ನು ವಾರ್ಷಿಕವಾರು, ಜಿಲ್ಲಾವಾರು, ತರಬೇತಿ ತೆಗೆದುಕೊಮಡಿರುವವರ ಸಂಪೂರ್ಣ ವಿವರಗಳನ್ನು ಒದಗಿಸುವುದು. | (ಉತ್ತರ ಕೆಳಗೆ) |

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ರಾಜ್ಯಾದ್ಯಂತ ಮುಖ್ಯಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳಡಿ ವಿವಿಧ ಸರ್ಕಾರಿ ಹಾಗೂ ಸರ್ಕಾರೇತರ ತರಬೇತುದಾರ ಸಂಸ್ಥೆಗಳ ಮೂಲಕ ನಿರುದ್ಯೋಗಿಗಳು ಒಳಗೊಂಡಂತೆ ಆಸಕ್ತ ಯುವಜನತೆಗೆ ಉಚಿತ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿಯನ್ನು ನೀಡುತ್ತಿದ್ದು ವಿವರವನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ.

ಮುಂದುವರೆದು ಸದರಿ ತರಬೇತಿಗೆ ಖರ್ಚಾಗಿರುವ ಅನುದಾನದ ಬಗ್ಗೆ ವಿವರ ಕೆಳಕಂಡಂತಿದೆ.

| ಕ್ರ.ಸಂ | ವರ್ಷ | ತರಬೇತಿಗಾಗಿ ಖರ್ಚು ಮಾಡಲಾದ ಅನುದಾನ |
|---|---|---|
| 1 | 2017–18 | 0 |
| 2 | 2018–19 | 79.03 |
| 3 | 2019–20 | 7883.63 |
| 4 | 2020–21 | 10942.95 |
| 5 | 2021–22 | 25130.73 |

**ತರಬೇತಿಯ ವಿವರ:-**

- ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 110746 ಅಭ್ಯರ್ಥಿಗಳಿಗೆ ವಿವಿಧ ವೃತ್ತಿಗಳಡಿ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡಲಾಗಿದೆ.
- ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ 33956 ಅಭ್ಯರ್ಥಿಗಳಿಗೆ ವಿವಿಧ ವೃತ್ತಿಗಳಡಿ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡಲಾಗಿದೆ.

**ರಾಷ್ಟ್ರೀಯ ಜೀವನೋಪಾಯ ಅಭಿಯಾನ**

**ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ**

ಡೇ-ಎನ್‌ಯುಎಲ್‌ಎಂ ಅಭಿಯಾನದಡಿ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕದಡಿ ನಿರುದ್ಯೋಗಿಗಳಿಗೆ ತರಬೇತಿಯನ್ನು ನೀಡಲಾದ ವರ್ಷವಾರು ವಿವರವನ್ನು **ಅನುಬಂಧ-3**ರಲ್ಲಿ ಲಗತ್ತಿಸಿದೆ ಹಾಗೂ ಖರ್ಚಾದ ಅನುದಾನಗಳ ವರ್ಷವಾರು ವಿವರ ಕೆಳಕಂಡಂತಿದೆ.

| ಕ್ರ.ಸಂ. | ವರ್ಷ | ಖರ್ಚು |
|---|---|---|
| 1 | 2018–19 | 5243.53 |
| 2 | 2019–20 | 3345.21 |
| 3 | 2020–21 | 2248.22 |
| 4 | 2021–22 | 4585.98 |
| 5 | 2022–23 | 4887.26 |

## ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್

ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ ವತಿಯಿಂದ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕದಡಿ ನಿರುದ್ಯೋಗಿಗಳಿಗೆ ತರಬೇತಿಯನ್ನು ನೀಡಲಾದ ವರ್ಷವಾರು ವಿವರವನ್ನು **ಅನುಬಂಧ–4**ರಲ್ಲಿ ಲಗತ್ತಿಸಿದೆ ಹಾಗೂ ಖರ್ಚಾದ ಅಂದಾಜು ಅನುದಾನದ ವಿವರ ವರ್ಷವಾರು ಕೆಳಕಂಡಂತಿದೆ.

| ಕ್ರ.ಸಂ. | ವರ್ಷ | ಖರ್ಚು |
|---|---|---|
| 1 | 2017–18 | 2016.05 |
| 2 | 2018–19 | 5988.92 |
| 3 | 2019–20 | 4705.58 |
| 4 | 2020–21 | 1333.06 |
| 5 | 2021–22 | 2168.1 |

## ಸಿಡಾಕ್

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ದಿಂದ ಕಳೆದ ಐದು ವರ್ಷಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಮಾಹಿತಿ ಹಾಗೂ ಖರ್ಚಾದ ಅನುದಾನದ ವಿವರ ಈ ಕೆಳಗಿನಂತಿದೆ.

| ವರ್ಷ | ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | ಖರ್ಚಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 2017–18 | 24553 | 401.35 |
| 2018–19 | 16491 | 237.02 |
| 2019–20 | 23356 | 244.00 |
| 2020–21 | 2308 | 170.00 |
| 2021–22 | 9773 | 99.55 |

ಸಂಖ್ಯೆ: ಕೌಉಜೀಇ 30 ಕೌಗುಪ್ರ 2022

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ–ಬಿಟಿ ಮತ್ತು
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಇಲಾಖಾ ಸಚಿವರು.

ಅನುಬಂಧ -1

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಕಳೆದ 5ವರ್ಷದಲ್ಲಿ ಮೀಸಲಿಟ್ಟ/ನಿಗಧಿಯಾದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ವಿವರ | ಆರ್ಥಿಕ ವರ್ಷ | ಮೀಸಲು/ನಿಗಧಿಯಾದ ಅನುದಾನ |
|---|---|---|
| ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ | 2017-18 | 62784.00 |
| | 2018-19 | 49057.99 |
| | 2019-20 | 45697.01 |
| | 2020-21 | 54299.53 |
| | 2021-22 | 46637.83 |
| | | |
| ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ) | 2017-18 | 5248.00 |
| | 2018-19 | 525.00 |
| | 2019-20 | 9896.88 |
| | 2020-21 | 11155.29 |
| | 2021-22 | 27375.55 |
| | | |
| ರಾಷ್ಟ್ರೀಯ ಜೀವನೋಪಾಯ ಅಭಿಯಾನ<br>1.(ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ) | 2017-18 | |
| | 2018-19 | 7429.95 |
| | 2019-20 | 9666.01 |
| | 2020-21 | 7648.43 |
| | 2021-22 | 6210.33 |
| | | |
| 2. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ (ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್) | 2017-18 | 7455.56 |
| | 2018-19 | 10290.75 |
| | 2019-20 | 11605.7 |
| | 2020-21 | 21719.45 |
| | 2021-22 | 21724.76 |
| | | |
| ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) | 2017-18 | 401.35 |
| | 2018-19 | 237.02 |
| | 2019-20 | 244.00 |
| | 2020-21 | 170.00 |
| | 2021-22 | 99.55 |
| | | |
| ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) | 2017-18 | 1000.00 |
| | 2018-19 | 1000.00 |
| | 2019-20 | 1000.00 |
| | 2020-21 | 1000.00 |
| | 2021-22 | 1000.00 |

## ಅನುಬಂಧ -೨

**ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಜಿಲ್ಲಾವಾರು, ತರಬೇತಿ ತೆಗೆದುಕೊಂಡಿರುವವರ ಸಂಪೂರ್ಣ ವಿವರ**

| ಕ್ರಮ ಸಂಖ್ಯೆ | ಜಿಲ್ಲೆ | 2018-19 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 2019-20 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 2020-21 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 2021-22 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|
| 01 | BAGALAKOTE | 30 | 177 | 866 | 989 |
| 02 | BALLARI | 563 | 420 | 2159 | 1889 |
| 03 | BELAGAVI | 38 | 331 | 1660 | 2632 |
| 04 | BENGALURU RURAL | 0 | 47 | 30 | 240 |
| 05 | BENGALURU URBAN | 360 | 428 | 1230 | 2341 |
| 06 | BIDAR | 79 | 470 | 659 | 1470 |
| 07 | CHAMARAJANAGARA | 60 | 240 | 207 | 390 |
| 08 | CHIKBALLAPUR | 59 | 0 | 270 | 600 |
| 09 | CHIKMAGALURU | 30 | 417 | 720 | 1080 |
| 10 | CHITRADURGA | 177 | 679 | 870 | 1470 |
| 11 | DAKSHINA KANNADA | 151 | 293 | 345 | 270 |
| 12 | DAVANGERE | 90 | 598 | 580 | 1290 |
| 13 | DHARWAD | 86 | 1348 | 1110 | 3293 |
| 14 | GADAG | 0 | 285 | 690 | 2123 |
| 15 | HASSAN | 178 | 1346 | 2195 | 4020 |
| 16 | HAVERI | 166 | 392 | 385 | 677 |
| 17 | KALABURGI | 233 | 754 | 1100 | 2130 |
| 18 | KODAGU | 0 | 239 | 138 | 150 |
| 19 | KOLAR | 214 | 291 | 150 | 300 |
| 20 | KOPPAL | 120 | 343 | 750 | 1320 |
| 21 | MANDYA | 0 | 730 | 1077 | 1650 |
| 22 | MYSURU | 443 | 491 | 1801 | 2699 |
| 23 | RAICHURU | 168 | 240 | 1199 | 1530 |
| 24 | RAMANAGARA | 0 | 270 | 249 | 480 |
| 25 | SHIVAMOGA | 175 | 220 | 1439 | 2186 |
| 26 | TUMKURU | 100 | 596 | 480 | 990 |
| 27 | UDUPI | 57 | 206 | 448 | 868 |
| 28 | UTTAR KANNADA | 70 | 89 | 120 | 510 |
| 29 | VIJAYANAGARA | 0 | 0 | 0 | 0 |
| 30 | VIJAYAPURA | 1079 | 1406 | 980 | 2040 |
| 31 | YADGIR | 89 | 510 | 1170 | 1770 |
| | ಒಟ್ಟು | 4815 | 13856 | 25077 | 43397 |

## District wise PMKVY Scheme - Trained Details

| ಕ್ರಮ ಸಂಖ್ಯೆ | ಜಿಲ್ಲೆ | 2017-18 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 2018-19 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 2019-20 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 2020-21 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 2021-22 ನೇ ಸಾಲಿನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|---|
| 1 | BAGALKOTE | 0 | 0 | 30 | 90 | 583 |
| 2 | BALLARI | 0 | 0 | 237 | 120 | 469 |
| 3 | BELAGAVI | 25 | 0 | 1230 | 360 | 480 |
| 4 | BENGALURU RURAL | 0 | 0 | 0 | 0 | 155 |
| 5 | BENGALURU URBAN | 0 | 153 | 130 | 120 | 275 |
| 6 | BIDAR | 0 | 0 | 175 | 60 | 881 |
| 7 | CHAMARAJANAGARA | 0 | 0 | 270 | 300 | 352 |
| 8 | CHIKKABALLAPURA | 114 | 0 | 657 | 150 | 409 |
| 9 | CHIKKAMAGALURU | 0 | 0 | 326 | 277 | 602 |
| 10 | CHITRADURGA | 0 | 0 | 0 | 90 | 378 |
| 11 | DAKSHINA KANNADA | 0 | 0 | 270 | 120 | 212 |
| 12 | DAVANGERE | 0 | 0 | 548 | 100 | 269 |
| 13 | DHARWAD | 0 | 129 | 828 | 120 | 556 |
| 14 | GADAG | 0 | 60 | 540 | 120 | 555 |
| 15 | HASSAN | 0 | 0 | 559 | 637 | 505 |
| 16 | HAVERI | 0 | 0 | 908 | 145 | 383 |
| 17 | KALABURAGI | 0 | 0 | 1484 | 220 | 1048 |
| 18 | KODAGU | 0 | 0 | 240 | 60 | 109 |
| 19 | KOLAR | 0 | 0 | 0 | 0 | 436 |
| 20 | KOPPAL | 0 | 0 | 0 | 60 | 865 |
| 21 | MANDYA | 206 | 87 | 954 | 558 | 331 |
| 22 | MYSURU | 0 | 0 | 210 | 360 | 508 |
| 23 | RAICHUR | 85 | 0 | 1016 | 450 | 350 |
| 24 | RAMANAGARA | 0 | 0 | 0 | 60 | 232 |
| 25 | SHIVAMOGGA | 0 | 0 | 432 | 420 | 379 |
| 26 | TUMAKURU | 0 | 0 | 239 | 60 | 545 |
| 27 | UDUPI | 0 | 0 | 0 | 0 | 420 |
| 28 | UTTARA KANNADA | 0 | 0 | 0 | 0 | 340 |
| 29 | VIJAYAPURA | 0 | 81 | 2051 | 430 | 747 |
| 30 | YADGIR | 0 | 0 | 300 | 90 | 425 |
| 31 | VIJAYANAGARA | 0 | 0 | 0 | 0 | 6 |
| | Grand Total | 430 | 510 | 13634 | 5577 | 13805 |

ಅನುಬಂಧ-03

ANNEXURE-II

Status of Skill Training Details (2018-19 to 2021-22) 5 years

| S.No | Name of the District | 2017-18 | 2018-19 | 2019-20 | 2020-21 | 2021-22 | Total |
|---|---|---|---|---|---|---|---|
| 1 | BAGALKOTE | 15 | 82 | 586 | 163 | 83 | 929 |
| 2 | BANGALORE RURAL | 0 | 0 | 20 | 0 | 0 | 20 |
| 3 | BANGALORE URBAN | 0 | 0 | 20 | 17 | 0 | 37 |
| 4 | BBMP | 0 | 0 | 0 | 0 | 668 | 668 |
| 5 | BELGAVI | 347 | 60 | 448 | 305 | 1940 | 3100 |
| 6 | BELLARY | 752 | 409 | 273 | 173 | 900 | 2507 |
| 7 | BIDAR | 208 | 67 | 0 | 242 | 429 | 946 |
| 8 | CHAMRAJNAGAR | 0 | 0 | 0 | 0 | 234 | 234 |
| 9 | CHICKBALAPUR | 0 | 0 | 151 | 7 | 0 | 158 |
| 10 | CHITRADURGA | 126 | 0 | 415 | 176 | 112 | 829 |
| 11 | DAKSHINAKANNADA | 0 | 0 | 0 | 0 | 161 | 161 |
| 12 | DAVANGERE | 0 | 0 | 166 | 212 | 254 | 632 |
| 13 | DHARWAD | 0 | 0 | 24 | 1443 | 1605 | 3072 |
| 14 | GADAG | 0 | 0 | 8 | 92 | 611 | 711 |
| 15 | HASSAN | 0 | 0 | 30 | 415 | 173 | 618 |
| 16 | HAVERI | 180 | 178 | 229 | 139 | 272 | 998 |
| 17 | KALABURGI | 777 | 431 | 804 | 384 | 710 | 3106 |
| 18 | KODAGU | 0 | 0 | 0 | 0 | 43 | 43 |
| 19 | KOLAR | 337 | 83 | 0 | 12 | 360 | 792 |
| 20 | KOPPAL | 25 | 0 | 0 | 279 | 286 | 590 |
| 21 | MANDYA | 0 | 0 | 0 | 0 | 86 | 86 |
| 22 | MYSORE | 86 | 50 | 0 | 0 | 284 | 420 |
| 23 | RAICHUR | 240 | 0 | 429 | 224 | 1293 | 2186 |
| 24 | RAMANAGAR | 0 | 0 | 0 | 176 | 466 | 642 |
| 25 | SHIMOGA | 413 | 50 | 271 | 321 | 49 | 1104 |
| 26 | TUMKUR | 0 | 0 | 155 | 346 | 74 | 575 |
| 27 | UDUPI | 0 | 0 | 0 | 24 | 143 | 167 |
| 28 | UTTARAKANNADA | 0 | 0 | 156 | 15 | 246 | 417 |
| 29 | VIJAYAPUR | 205 | 182 | 613 | 401 | 117 | 1518 |
| 30 | YADAGIRI | 40 | 0 | 56 | 19 | 829 | 944 |
| | | 3751 | 1592 | 4834 | 5585 | 12342 | 28104 |

## ಅನುಬಂಧ-4

## ಡಿಡಿಯು-ಜಿಕೆವೈ ಈ ಯೋಜನೆಯಡಿ ನೀಡಲಾಗುತ್ತಿರುವ ತರಬೇತಿಗಳ ವಿವರ

| ಕ್ರ.ಸಂ | ಜಿಲ್ಲೆಗಳು | 2017-18 | 2018-19 | 2019-20 | 2020-21 | 2021-22 |
|---|---|---|---|---|---|---|
| | | ತರಬೇತಿ ಹೊಂದಿದವರ ಸಂಖ್ಯೆ | ತರಬೇತಿ ಹೊಂದಿದವರ ಸಂಖ್ಯೆ | ತರಬೇತಿ ಹೊಂದಿದವರು ಸಂಖ್ಯೆ | ತರಬೇತಿ ಹೊಂದಿದವರ ಸಂಖ್ಯೆ | ತರಬೇತಿ ಹೊಂದಿದವರು ಸಂಖ್ಯೆ |
| 1 | ಹಾವೇರಿ | 70 | 121 | 346 | 123 | 143 |
| 2 | ಮೈಸೂರು | 170 | 409 | 531 | 74 | 213 |
| 3 | ಬೆಳಗಾವಿ | 4 | 345 | 642 | 6 | 12 |
| 4 | ಶಿವಮೊಗ್ಗ | 93 | 52 | 38 | 13 | 15 |
| 5 | ಉತ್ತರ ಕನ್ನಡ | 208 | 296 | 73 | 95 | 104 |
| 6 | ಬಾಗಲಕೋಟೆ | 2 | 150 | 232 | 91 | 91 |
| 7 | ತುಮಕೂರು | 108 | 515 | 247 | 65 | 160 |
| 8 | ರಾಮನಗರ | 121 | 222 | 95 | 15 | 20 |
| 9 | ಬಳ್ಳಾರಿ | 39 | 133 | 48 | 87 | 248 |
| 10 | ಯಾದಗಿರಿ | 9 | 354 | 94 | 73 | 78 |
| 11 | ಬೆಂಗಳೂರು | 68 | 98 | 20 | 6 | 93 |
| 12 | ಮಂಡ್ಯ | 130 | 128 | 83 | 15 | 21 |
| 13 | ಗದಗ | 151 | 120 | 207 | 37 | 50 |
| 14 | ಚಿಕ್ಕಬಳ್ಳಾಪುರ | 114 | 406 | 268 | 97 | 47 |
| 15 | ಬೀದರ್ | 48 | 107 | 236 | 63 | 119 |
| 16 | ಕೊಪ್ಪಳ | 32 | 95 | 127 | 31 | 98 |
| 17 | ಗುಲಬರ್ಗಾ | 445 | 1537 | 841 | 118 | 214 |
| 18 | ಧಾರವಾಡ | 112 | 58 | 167 | 148 | 2 |
| 19 | ದಾವಣಗೆರೆ | 208 | 101 | 120 | 26 | 40 |
| 20 | ಬಿಜಾಪುರ | 52 | 435 | 151 | 0 | 54 |
| 21 | ರಾಯಚೂರು | 55 | 423 | 164 | 211 | 262 |
| 22 | ಬೆಂಗಳೂರು ಗ್ರಾಮಾಂತರ | 187 | 99 | 38 | 6 | 60 |
| 23 | ಹಾಸನ | 246 | 798 | 474 | 180 | 348 |
| 24 | ಚಿತ್ರದುರ್ಗ | 7 | 95 | 222 | 63 | 111 |
| 25 | ಕೊಡಗು | 2 | 137 | 122 | 21 | 13 |
| 26 | ಚಿಕ್ಕಮಗಳೂರು | 1 | 208 | 138 | 18 | 8 |
| 27 | ಚಾಮರಾಜನಗರ | 10 | 292 | 294 | 101 | 187 |
| 28 | ಕೋಲಾರ | 119 | 69 | 130 | 11 | 72 |
| 29 | ದಕ್ಷಿಣ ಕನ್ನಡ | 43 | 194 | 262 | 10 | 40 |
| 30 | ಉಡುಪಿ | 31 | 207 | 36 | 18 | 47 |
| | ಒಟ್ಟು | 2885 | 8204 | 6446 | 1822 | 2970 |

## ಅನುಬಂಧ-4

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ನೀಡಲಾಗುತ್ತಿರುವ ತರಬೇತಿಗಳ ವಿವರ

| ಕ್ರ.ಸಂ | ವಿಭಾಗ | Trade | ಅವಧಿ |
|---|---|---|---|
| 1 | **ಹೆಲ್ತ್‌ಕೇರ್** | ಬ್ಲಡ್ ಬ್ಯಾಂಕ್ ಟೆಕ್ನಿಷಿಯನ್ | 6 ತಿಂಗಳು |
| 2 | **ಹೆಲ್ತ್‌ಕೇರ್** | ತುರ್ತು ಮೆಡಿಕಲ್ ಟೆಕ್ನಿಷಿಯನ್ | 3 ತಿಂಗಳು |
| 3 | ಪ್ರೊಡಕ್ಷನ್ & ಮೆನ್ಯೂಫ್ಯಾಕ್ಚರ್ | ಡ್ರಾಫ್ಟಿಂಗ್ | ಅನ್ವಯಿಸುವುದಿಲ್ಲ |
| 4 | **ಹೆಲ್ತ್‌ಕೇರ್** | ಮೆಡಿಕಲ್ ಲ್ಯಾಬೋರೆಟರಿ ಟೆಕ್ನಿಷಿಯನ್ | ಅನ್ವಯಿಸುವುದಿಲ್ಲ |
| 5 | **ಅಪರೆಲ್** | ಸ್ವಿಂಗ್ ಮೆಷಿನ್ ಆಪರೇಟರ್-ನೈಟ್ಸ್ | 3 ತಿಂಗಳು |
| 6 | **ಅಪರೆಲ್** | ಸ್ಪೆಷಲಿಜ್ಯಡ್ ಸ್ವಿಂಗ್ ಮೆಷಿನ್ ಆಪರೇಟರ್ | 3 ತಿಂಗಳು |
| 7 | **ಟೂರಿಸಂ & ಹಾಸ್ಪಲಿಟಿ** | ಫುಡ್ & ಬೆವರಿಜ್ ಸರ್ವೀಸ್ ಮ್ಯಾನೆಜರ್ | 1 ವರ್ಷ |
| 8 | **ಟೂರಿಸಂ & ಹಾಸ್ಪಲಿಟಿ** | ಫುಡ್ & ಬೆವರಿಜ್ ಸರ್ವೀಸ್ ಅಸಿಸ್ಟೆಂಟ್ | 3 ತಿಂಗಳು |
| 9 | ರೀಟೆಲ್ | ರಿಟೈಲ್ ಟೀಮ್ ಲೀಡರ್ | 3 ತಿಂಗಳು |
| 10 | ಮ್ಯಾನೆಜ್‌ಮೆಂಟ್ & ಎಂಟರ್ ಪ್ರಿನಿಯರ್‌ಶಿಪ್ & ಪ್ರೋಫೆಶನಲ್ | ರಿಟೈಲ್ ಟೀಮ್ ಲೀಡರ್ | 3 ತಿಂಗಳು |
| 11 | ಇನ್‌ಫರ್‌ಮೆಶನ್ & ಕಮ್ಯೂನಿಕೇಶನ್ ಟೆಕ್ನಲಜಿ | ಬಿಪಿಒ ವೈಸ್ | ಅನ್ವಯಿಸುವುದಿಲ್ಲ |
| 12 | **ಐಟಿ-ಐಟಿಸ್** | ಸಿಆರ್‌ಎಂ ಡೊಮಿಸ್ಟಿಕ್ ವೈಸ್ | ಅನ್ವಯಿಸುವುದಿಲ್ಲ |
| 13 | **ಅಪರೆಲ್** | ಸೆಪ್‌ಲಿಂಗ್ ಟೈಲರ್ | 3 ತಿಂಗಳು |
| 14 | **ಅಪರೆಲ್** | ಸೆಲ್ಫ್ ಎಂಪ್‌ಲೈಡ್ ಟೈಲರ್ | 3 ತಿಂಗಳು |
| 15 | ಹ್ಯಾಂಡಿಕ್ರಾಫ್ಟ್ & ಕಾರ್‌ಪೆಟ್ | ಕ್ರೋಚೆಟ್ ಲೆಸ್ ಟೈಲರ್ | 3 ತಿಂಗಳು |